ಕಾರನ್ನು ಮನೆ ಮೆಟ್ಟಿಲಿನವರೆಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದ ಕೇಶವ. ಕಾರಿನ ಬಾಗಿಲು ತೆಗೆದು ರಾಧಮ್ಮ ಕೆಳಗಿಳಿಯುವುದಕ್ಕಿಲ್ಲ, ಮಾಧವ ಹಾಜರು. "ರಾಧತ್ತೇ, ನೀನೀಗ ಸೀನಿಯರ್ ಸಿಟಿಜನ್. ಕೈ ಹಿಡ್ಕೊಂಡು ಕರ್ಕೊಂಡ್ಹೋಗ್ಬೇಕಾ ಅಥವಾ ನೀನೇ ನಡ್ಕೊಂಬರ್ತೀಯಾ?" ಕೀಟಲೆ ಮಾಡಿದ.

"ಹೋಗೋ ಕತ್ತೆ, ನಿನಗಿಂತಾ ಗಟ್ಟಿಯಾಗಿದೀನಿ, ಗೊತ್ತಾಯ್ತಾ?" ಮಾಧವನ ಹೆಗಲಿಗೊಂದು ಪೆಟ್ಟು ಕೊಟ್ಟು ಮೆಟ್ಟಿಲು ಹತ್ತಿ ಮನೆಯೊಳಗೆ ಹೆಜ್ಜೆ ಇಟ್ಟರು ರಾಧಮ್ಮ. ದಿಬ್ಬಣ ನೆರೆದ ಹಾಗೆ ಮನೆಯೊಳಗಿದ್ದವರು ಒಬ್ಬೊಬ್ಬರಾಗಿ ಹೊರಗೆ ಬಂದು ಸೇರಿದರು. ರಾಧಮ್ಮನೇ ತಂದುಕೊಟ್ಟಿದ್ದ ಬೂದುಬಣ್ಣದ ಶಾಲು ಹೊದ್ದ ತಮ್ಮ ರಾಮಕೃಷ್ಣ, ಸೀರೆನೆರಿಗೆಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಒಳಗೇನೋ ಕೆಲಸ ಮಾಡುತ್ತಿದ್ದ ತಮ್ಮನ ಹೆಂಡತಿ ಸುವರ್ಣ, ಮಾಧವನ ಹೆಂಡತಿ ಮಮತಾ ಬಂದರು.

"ಅತ್ತಿಗೆ, ನಡೀರಿ ಒಳಗೆ. ಕೈಕಾಲು ತೊಳ್ಕಂಬನ್ನಿ. ತಿಂಡಿ ರೆಡೀ ಇದೆ..." ಉಪಚಾರ ಹೇಳಿದಳು ಸುವರ್ಣ. ಕುರ್ಚಿಯಲ್ಲಿ ಕೂತು ಶೂಸು ಕಳಚುತ್ತಿದ್ದ ಕೇಶವ ಅಮ್ಮ ತಿಂಡಿ ಅಂದಕೂಡಲೆ ಬಾಯಿಬಿಟ್ಟ, "ಅಮ್ಮಾ, ಏನು ತಿಂಡಿ ಮಾಡಿದೀಯಾ?"

"ಆಹಾ, ತಿಂಡಿ ಅಂದ್ಕೂಡ್ಲೆ ಇವನ ಕಿವಿ ನೆಟ್ಟಗಾಗಿಬಿಡ್ತು ನೋಡು" ಮಾಧವ ಅಣ್ಣನಿಗೆ ತಗುಲಿಕೊಂಡ.

"ನೀನ್ಯಾಕೋ ಮಧ್ಯೆ ಬಾಯಿ ಹಾಕ್ಕೊಂಡು ಬರ್ತಿ? ನಾಲಿಗೆ ತುರಿಸುತ್ತಾ?"

"ಹಂಗೇ ಅಂದ್ಕೋ..."

"ಶುರುವಾಯ್ತಾ?" ಅಂದಳು ಸುವರ್ಣ, ಹಳೆಯ ನೆನಪು ಮರುಕಳಿಸಿದಂತೆ. ಸಣ್ಣವರಿದ್ದಾಗ ಇಬ್ಬರೂ ಅದೆಷ್ಟು ಜಗಳ ಕಾಯುತ್ತಿದ್ದರು ಅಂದರೆ ಕೈಲಿ ಹಿಡಿಕುಂಟೆ ಇದ್ದರೆ ಅದರಲ್ಲೇ ಜಪ್ಪಲು ಸುವರ್ಣ ಹಿಂದೆಮುಂದೆ ನೋಡುತ್ತಿರಲಿಲ್ಲ. ಹೈಸ್ಕೂಲಿಗೆ ಹೋಗುತ್ತಿದ್ದಂತೆ ಕೇಶವನ ಗಮನ ಓದುವುದರ ಕಡೆ ಹೆಚ್ಚುಹೆಚ್ಚಾಯ್ತು. ರಾಧತ್ತೆ ಮುಂದೆ ಅನುಕೂಲವಾಗುತ್ತದೆ ಎಂದು ಇಂಗ್ಲಿಷ್ ಮೀಡಿಯಮ್ಮಿಗೆ ಸೇರಿಸಲು ಹೇಳಿದ್ದು ಐದಾರು ತಿಂಗಳು ಕಬ್ಬಿಣದ ಕಡಲೆಯಾಗಿಬಿಟ್ಟಿತ್ತು ಕೇಶವನಿಗೆ. ಮುಂದೆ ಬಲುಬೇಗ ಸುಧಾರಿಸಿಕೊಂಡು ಅವನು ದಾರಿಗೆ ಹತ್ತಿದ. ಹತ್ತಿದನಾ ಅಥವಾ ಹತ್ತಿದಂತೆ ಕಾಣಿಸುತ್ತಿದ್ದಿದ್ದು ಇಳಿಜಾರಿನ ಹೆಜ್ಜೆಯಾಗಿತ್ತಾ? ಹೆಸರಿಗೊಂದು ಡಿಗ್ರಿ ಮಾಡಿಕೊಂಡು

